| | | |
|---|---|---|
| ಓ ಎಸ್ | 26/2014 | ಡಿ.ಡಬ್ಲ್ಯೂಃ 3 |

ಇಂದು ದಿಃ 13/02/2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ-

ಶ್ರೀರಾಮಪುರದಲ್ಲಿ ಚೆಲುವಯ್ಯ ಎಂಬ ಹೆಸರಿನ ತುಂಬಾ ಜನ ವ್ಯಕ್ತಿಗಳಿದ್ದಾರೆ. ನನ್ನ ತಾಯಿಯ ಹೆಸರು ಪುಟ್ಟಮ್ಮ. ನನ್ನ ತಂದೆಯ ಹೆಸರು ಚೆಲುವಯ್ಯ. ನಿ ಡಿ 26 ದಾನಪತ್ರದಲ್ಲಿ ಸಿಂಗ್ರಯ್ಯನ ಚೆಲುವಯ್ಯ ಎಂದು ಬರೆದಿದೆ ನಾನು ಕೊಟ್ಟಿರುವ ದಾಖಲೆಯಲ್ಲಿ ಸಿಂಗ್ರಯ್ಯ ಚೆಲುವಯ್ಯ ಎಂದು ಇದೆ ಹೊರತು ಸಿಂಗ್ರಯ್ಯನ ಚೆಲುವಯ್ಯ ಎಂದು ಇಲ್ಲ ಎಂದರೆ ಸಿಂಗ್ರಯ್ಯನ ಚೆಲುವಯ್ಯ ಎಂದು ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸಿಂಗ್ರಯ್ಯ ಚೆಲುವಯ್ಯ ಮತ್ತು ಚೆಲುವಯ್ಯ ಎಂದರೆ ಬೇರೆ ಬೇರೆ ವ್ಯಕ್ತಿಗಳಾ ಎಂದರೆ ಸಾಕ್ಷಿಯು ಚೆಲುವಯ್ಯನ ತಂದೆ ಸಿಂಗ್ರಯ್ಯ ಎಂದು ನುಡಿಯತ್ತಾರೆ. ಸಿಂಗ್ರಯ್ಯನ ಚೆಲುವಯ್ಯ ಕಾಲವಾಗಿ ಎಷ್ಟು ಸಮಯವಾಗಿದೆ ಎಂದರೆ ಸಾಕ್ಷಿಯು 2013 ರಲ್ಲಿ ಕಾಲವಾಗಿದ್ದಾರೆ ಎಂದು ನುಡಿಯುತ್ತಾರೆ. ಸಿಂಗ್ರಯ್ಯನ ಚೆಲುವಯ್ಯನವರ ತಂದೆ ಸಿಂಗ್ರಯ್ಯ ಎಂದರೆ ಸುಳ್ಳು ಸಿಂಗ್ರಯ್ಯನ ಚೆಲುವಯ್ಯ 1962 ರಲ್ಲಿ ಕಾಲವಾಗಿದ್ದಾರೆ ಎಂದರೆ ಇಲ್ಲ 2013 ರಲ್ಲಿ ಎಂದು ಸಾಕ್ಷಿ ನುಡಿಯುತ್ತಾರೆ. 2006 ರಲ್ಲಿ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ ವಂಶವೃಕ್ಷದಲ್ಲಿ ನನ್ನ ತಂದೆ ಚೆಲುವಯ್ಯ ಜೀವಂತವಾಗಿದ್ದಾರೆ ಎಂದು ಕಾಣಿಸಿದ್ದೆ ಎಂದರೆ ಹೌದು. ನಾನು ಎನ್ ಸಿ ನರಸಿಂಹಮೂರ್ತಿ ಶ್ರೀರಾಮಪುರ ಪ್ರಾಥಮಿಕ ಶಾಲೆಯಲ್ಲಿ ಕಲಿತಿದ್ದೆ ಎಂದರೆ ಸರಿ. ನಿ ಡಿ 8 ಶಾಲಾ ರಿಜಿಸ್ಟರ್ ನಲ್ಲಿ ನನ್ನ ತಂದೆಯ ಹೆಸರು ಚೆಲುವಯ್ಯ ಎಂದು ಮಾತ್ರ ಇದೆ ಸಿಂಗ್ರಯ್ಯನ ಚೆಲುವಯ್ಯ ಎಂದು ಇಲ್ಲ ಎಂದರೆ ಸುಳ್ಳು. ನನ್ನ ಅಣ್ಣ ಎನ್ ಸಿ ವೆಂಕಟೇಶ್ ನಿ ಡಿ 7 ರ ಪ್ರಕಾರ ನಗರ್ಲೆ ಪ್ರಾಥಮಿಕ ಶಾಲೆಯಲ್ಲಿ ಕಲಿತಿದ್ದಾರೆ ಎಂದರೆ ಸರಿ. ನಿ ಡಿ 7 ರ ಪ್ರಕಾರ ಎನ್ ಸಿ ವೆಂಕಟೇಶ್ ರವರ ತಂದೆ ಹೆಸರು ಚೆಲುವಯ್ಯ ಎಂದು ಇದೆ ಎಂದರೆ ಸರಿ. ನಿ ಡಿ 7 ಮತ್ತು 8 ರಲ್ಲಿ ತಂದೆ ಹೆಸರು ಸಿಂಗ್ರಯ್ಯನ ಚೆಲುವಯ್ಯ ಎಂದು ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ.

ನಿ ಡಿ 26 ದಾನಪತ್ರದ ಮೂಲಕ ಒಂದು ಮಂಗಳೂರು ಹೆಂಚಿನ ಮನೆ ಕೊಟ್ಟಿದ್ದು ಅದರ ಅಳತೆ ಮತ್ತು ಅಸೆಸ್ ಮೆಂಟ್ ನಂಬರ್ ನನಗೆ ಜ್ಞಾಪಕವಿಲ್ಲ. ನನ್ನ ತಾಯಿಗೆ ದಾನಪತ್ರದ ಮೂಲಕ ಮನೆ ಬಂದಿದೆ ಎಂದು ನಾನು ಹೇಳಿದ್ದು ದಾನಪತ್ರದ ಪ್ರಕಾರ ನನ್ನ ತಾಯಿ ಹೆಸರಿಗೆ

ಖಾತೆ ಇದೆ. ಸದರಿ ಖಾತೆ ದಾಖಲೆಯನ್ನು ನಾನು ಈ ದಾವೆಯಲ್ಲಿ ಹಾಜರು ಮಾಡಿದ್ದೇನೆ. ಆ ರೀತಿ ಹಾಜರು ಮಾಡಿಲ್ಲ ಎಂದರೆ ಸುಳ್ಳು. ದಾನಪತ್ರದಲ್ಲಿರುವ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 14 ಗಜ, ದಕ್ಷಿಣೋತ್ತರ 7.5 ಗಜ ಮತ್ತು ಅಸೆಸ್ ಮೆಂಟ್ ನಂಬರ್ 1841 ಎಂದರೆ ಸರಿ. ಈ ದಾವೆಯಲ್ಲಿ ಆ ಅಳತೆಯ ಮತ್ತು ಅಸೆಸ್ ಮೆಂಟ್ ನಂಬರ್ ನ ಯಾವುದೇ ಸ್ವತ್ತು ಇಲ್ಲ ಎಂದರೆ ಸುಳ್ಳು. ನನ್ನ ತಾಯಿಗೆ ದಾನಪತ್ರದ ಮೂಲಕ ಆಸ್ತಿ ಬರುತ್ತಿದ್ದಲ್ಲಿ ನನ್ನ ತಾಯಿಯ ಹೆಸರಿಗೆ ಖಾತೆ ಆಗುತ್ತಿತ್ತು ಹಾಗೂ ಆ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತಿದ್ದೆ ಹಾಗೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡದ ಕಾರಣ ನಿ ಡಿ 26 ರ ಆಸ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿ ಡಿ 26 ದಾನಪತ್ರದಲ್ಲಿ ತೋರಿಸಿದ ಪುಟ್ಟಮ್ಮ ನನ್ನ ತಾಯಿ ಅಲ್ಲ ಎಂದರೆ ಸುಳ್ಳು.

ದಾವಾ ಅನುಸೂಚಿಯ 1 ನೇ ಸ್ವತ್ತು ಸ.ನಂ.43/2 ಬಿ ರಲ್ಲಿ 16.5 ಗುಂಟೆ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದರಲ್ಲಿ ಭಾಗವಾಗಿ 8 1/4 ಗುಂಟೆಯ ಬಗ್ಗೆ ನನ್ನ ಮತ್ತು ನನ್ನ ಅಣ್ಣ ಎನ್ ಸಿ ವೆಂಕಟೇಶ್ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೇನೆ. ಉಳಿಕೆ 8 1/4 ಗುಂಟೆಯ ಖಾತೆ ಗೌರಮ್ಮನವರ ಮಕ್ಕಳು ಅಂದರೆ ಈ ದಾವೆಯ ವಾದಿಗಳು ಮತ್ತು 1 ರಿಂದ 3 ಪ್ರತಿವಾದಿಗಳ ಹೆಸರಿನಲ್ಲಿ ಸುಮಾರು 1 ವರ್ಷದಿಂದ ಇದೆ. ನಮ್ಮ ಹೆಸರಿನಲ್ಲಿರುವ 8 1/4 ಗುಂಟೆ ಆಸ್ತಿಯ ಖಾತೆ ಗೌರಮ್ಮನ ಮಕ್ಕಳ ಹೆಸರಿನಲ್ಲಿ ಸುಮಾರು 20 ವರ್ಷಗಳಿಂದ ಇತ್ತು. ನಮ್ಮ ಹೆಸರಿನಲ್ಲಿ ಖಾತೆ ಅಸಲು ದಾವೆ ಸಂಖ್ಯೆ 81/2006 ರಲ್ಲಿ ಆದ ತೀರ್ಪಿನ ಪ್ರಕಾರ ಆಗಿದೆ. ಸಾಕ್ಷಿಯು ಸ್ವತಃ 2009 ರಲ್ಲಿ ತೀರ್ಮಾನವಾಗಿತ್ತು ಎಂದು ನುಡಿಯುತ್ತಾರೆ. ನಮ್ಮ ಹೆಸರಿನಲ್ಲಿ ಖಾತೆಯಾಗುವ ಮೊದಲು ಗೌರಮ್ಮನ ಮಕ್ಕಳ ಹೆಸರಿನಲ್ಲಿ ಇದ್ದ ಖಾತೆ ಸರಿಯಿಲ್ಲ ಎಂದು ನಾವು ರೆವಿನ್ಯೂ ಅಧಿಕಾರಿಗಳ ಮುಂದೆ ಪ್ರಶ್ನಿಸಿರಲಿಲ್ಲ, ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆವು. 16.5 ಗುಂಟೆ ಆಸ್ತಿಯ ಬಾಬ್ತು ನಾನು ಖಾತೆ ಮಾಡಿಸಿಕೊಳ್ಳುವಾಗ ಕಂದಾಯ ಪಾವತಿಸಿದ್ದೆ, ಅದಕ್ಕಿಂತ ಮೊದಲು ಪಾವತಿಸಿರಲಿಲ್ಲ. ಸದರಿ 16.5 ಗುಂಟೆ ಆಸ್ತಿ ಈಗ ಮನೆ ನಿವೇಶನಗಳಾಗಿವೆ. ಅಲ್ಲಿ 1 ನೇ ವಾದಿ, 6 ನೇ ಪ್ರತಿವಾದಿ ಮತ್ತು ಯೋಗೇಶ್ ಒಂದೊಂದು ಮನೆ ಕಟ್ಟಿದ್ದಾರೆ. ಉಳಿದ ಜಾಗ ಖಾಲಿ ನಿವೇಶನವಾಗಿದೆ. 1 ನೇ ವಾದಿ ಅಲ್ಲಿ ಮನೆ ಕಟ್ಟಿ ಅಂದಾಜು 10 ವರ್ಷಗಳಾಗಿವೆ. 6 ನೇ ಪ್ರತಿವಾದಿ ಮನೆ ಕಟ್ಟಿ ಅಂದಾಜು 8 ವರ್ಷಗಳಾಗಿವೆ. ಯೋಗೇಶ್ ಮನೆ ಕಟ್ಟಿ 10-15 ವರ್ಷಗಳಾಗಿವೆ. ವ್ಯವಸಾಯದ ಭೂಮಿಯನ್ನು ಸೈಟ್ ಗಳನ್ನಾಗಿ

ಪರಿವರ್ತನೆ ಮಾಡಿದಾಗ ಉಪವಿಭಾಗಾಧಿಕಾರಿಗಳಿಂದ ಆದೇಶ ಪಡೆದುಕೊಳ್ಳಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಯಾರು ಆದೇಶ ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಯೋಗೇಶ್ ರವರಿಗೆ ಯಾರು ಯಾವ ರೀತಿ ಸೈಟ್ ಕೊಟ್ಟಿದ್ದರು ಎಂದುನನಗೆ ಗೊತ್ತಿಲ್ಲ. ಒ.ಎಸ್ 81/2006 ದಾವೆ ಸಲ್ಲಿಸಿದ ನಂತರ ಯೋಗೇಶ್ ಅಲ್ಲಿ ಮನೆ ಕಟ್ಟುವಾಗ ಯಾಕೆ ಮನೆ ಕಟ್ಟುತ್ತಿದ್ದಿರಾ ಎಂದು ನಾನು ಅವರನ್ನು ಪ್ರಶ್ನಿಸಿರಲಿಲ್ಲ. ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ 8 1/4 ಗುಂಟೆ ಆಸ್ತಿಯ ಬಗ್ಗೆ ಖಾತೆ ತಹಸಿಲ್ದಾರರ ಕಚೇರಿಯಲ್ಲಿ ಆಗಿದೆ. ಆ ಬಗ್ಗೆ ನಡವಳಿಕೆಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ತೊಂದರೆ ಇರಲಿಲ್ಲ. ಸದರಿ 16.5 ಗುಂಟೆ ಆಸ್ತಿ ವಾದಿಗಳು 1 ರಿಂದ 3 ಪ್ರತಿವಾದಿಗಳು ಮತ್ತು 6 ನೇ ಪ್ರತಿವಾದಿಗೆ ಮಾತ್ರ ಸೇರಿದ್ದಾಗಿದ್ದು, ಅದರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಅನುಸೂಚಿಯ 3 ನೇ ಸ್ವತ್ತು ಚಾಮಲಾಪುರ ಗ್ರಾಮದ ಸ.ನಂ.64/2, 1 ಎಕರೆ 11 ಗುಂಟೆ ನಂಜನಗೂಡು ರೇಲ್ವೆ ಸ್ಟೇಷನ್ ಪಕ್ಕದಲ್ಲಿ ಇದೆ ಎಂದರೆ ಸರಿ. ಆ ಜಾಗವನ್ನು ಈಗ ಅಂಬೇಡ್ಕರ್ ಸರ್ಕಲ್ ಎಂದು ಕರೆಯುತ್ತಾರೆ ಎಂದರೆ ಸರಿ. ಆ ಜಾಗದಲ್ಲಿ ಈಗ ವಾಣಿಜ್ಯ ಸಂಕೀರ್ಣ ಅಂದರೆ ಅಂಗಡಿ ಮಳಿಗೆಗಳು ಆಗಿವೆ ಎಂದರೆ ಸರಿ. ಅದು ನಗರಸಭೆಯ ವ್ಯಾಪ್ತಿಗೆ ಬರುತ್ತದೆ ಎಂದರೆ ಇತ್ತೀಚೆಗೆ ಬಂದಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಅರ್ಧ ಭಾಗದ ಖಾತೆ ಅಂದರೆ ಖಾಲಿ ನಿವೇಶನದ ಖಾತೆ ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿ ಇದೆ ಹಾಗೂ ಉಳಿದ ಅರ್ಧ ಭಾಗದ ಖಾತೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿ ಈಗ ಒಂದುವರೆ ವರ್ಷದಿಂದ ಖಾತೆ ಬರುತ್ತಿದೆ. ಆ ಆಸ್ತಿಯ ಬಗ್ಗೆ ನಾವು ಕಂದಾಯ ಪಾವತಿಸಿದ್ದೇವೆ. ಆ ಆಸ್ತಿಯ ಅಸೆಸ್ ಮೆಂಟ್ ನಂಬರ್ ನಮ್ಮ ಹೆಸರಿನಲ್ಲಿ ಇರುವ ಬಗ್ಗೆ ಹಾಗೂ ನಾವು ಕಂದಾಯ ಪಾವತಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ಉಳಿಕೆ ಅರ್ಧ ಭಾಗದಲ್ಲಿ ಕಟ್ಟಡ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಬಗ್ಗೆ ಕಟ್ಟಡ ಪರವಾನಗಿ ಯಾರ ಹೆಸರಿನಲ್ಲಿ ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ಭಾಗದ ಆಸ್ತಿಗೆ ನಾವು ಎಷ್ಟು ಕಂದಾಯ ಪಾವತಿಸಿದ್ದೇವೆ ಎಂದರೆ ಸಾಕ್ಷಿಯು ನನ್ನ ಅಣ್ಣ ಪಾವತಿಸಿದ್ದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಕಟ್ಟಡ ಕಟ್ಟಿಸುಮಾರು 15 ವರ್ಷಗಳು ಆಗಿರಬಹುದು. ಸಾಕ್ಷಿಯು ಮುಂದುವರೆದು 2006 ರಲ್ಲಿ ದಾವೆ ಸಲ್ಲಿಸಿದ ನಂತರ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದರು ಎಂದು ನುಡಿಯುತ್ತಾರೆ. ಕೇಸು ನಡೆಯುತ್ತಿರುವ ಕಾರಣ ಕಟ್ಟಡ ಕಟ್ಟಬಾರದು ಮತ್ತು ಲೈಸೆನ್ಸ್ ಕೊಡಬಾರದು ಎಂದು ನಾನು

ನಗರಸಭೆಗೆ ತಕರಾರು ಸಲ್ಲಿಸಿದ್ದೆ. ಆ ತಕರಾರಿನ ಬಗ್ಗೆ ನಗರಸಭೆಯವರು ಯಾವುದೇ ಆದೇಶ ಮಾಡಿರಲಿಲ್ಲ. 2006 ರಲ್ಲಿ ನಾವು ಸಲ್ಲಿಸಿದ ದಾವೆಯಲ್ಲಿ ಸದರಿ ಕಟ್ಟಡ ಕಟ್ಟಬಾರದು ಎಂದು ನ್ಯಾಯಾಲಯ ತಡೆಯಾಜ್ಞೆ ಮಾಡಿತ್ತು ಆದರೂ ಕಟ್ಟಡ ಕಟ್ಟಿದ್ದರು. ನ್ಯಾಯಾಲಯದ ಆದೇಶದ ವಿರುದ್ಧವಾಗಿ ಕಟ್ಟಡ ಕಟ್ಟಿದ ಬಗ್ಗೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯ ಮೇಲೆ ಯಾವುದೇ ಆದೇಶ ಆಗಿರಲಿಲ್ಲ. ನಾನು ನ್ಯಾಯಾಲಯಕ್ಕೆ 2 ನೇ ಪ್ರತಿವಾದಿ ನ್ಯಾಯಾಲಯದ ಆದೇಶ ಇದ್ದರೂ ಕಟ್ಟಡ ಕಟ್ಟಿದ ಬಗ್ಗೆ ಹಾಗೂ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಾವು ಅರ್ಜಿ ಸಲ್ಲಿಸಿದ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ಸ.ನಂ. 64/2 ರ ಸ್ವತ್ತಿನಲ್ಲಿ ನನಗೂ ನನ್ನ ಅಣ್ಣನಿಗೂ ಯಾವುದೇ ಹಕ್ಕು ಇಲ್ಲದ ಕಾರಣ ನಾವು ಯಾವುದೇ ತಕರಾರು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕಟ್ಟಡ ಕಟ್ಟಿ ಬಾಡಿಗೆಗೆ ಕೊಟ್ಟರೂ ನಮಗೆ ಯಾವುದೇ ಹಕ್ಕು ಇಲ್ಲದಿದ್ದ ನಾವು ತಕರಾರು ಮಾಡಿರಲಿಲ್ಲ ಎಂದರೆ ಸಾಕ್ಷಿಯು ನಾವು ಹೋಗಿ ಕಟ್ಟಡ ಕಟ್ಟುವುದನ್ನು ತಡೆದರೂ ಅವರು ತಬ್ಬಾಳಿಕೆ ಮಾಡಿ ಕಟ್ಟಿದ್ದರು ಎಂದು ನುಡಿಯುತ್ತಾರೆ.

ಶ್ರೀರಾಮಪುರದಲ್ಲಿರುವ ಒಂದು ಖಾಲಿ ನಿವೇಶನ ಅಂದರೆ ದಾವಾ ಅನುಸೂಚಿಯ 6 ನೇ ಸ್ವತ್ತು ಹಾಗೂ ಮೂರು ಮನೆಗಳು ಅಂದರೆ ದಾವಾ ಅನುಸೂಚಿಯ 4,5 ಮತ್ತು 7 ರ ಸ್ವತ್ತುಗಳು ವಾದಿಗಳ ಹೆಸರಿನಲ್ಲಿ ಇರುವ ಕಾರಣ ನಮಗೆ ಅವುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಈಗ ಒಂದುವರೆ ವರ್ಷದಿಂದ ನಮ್ಮ ಹೆಸರಿನಲ್ಲೂ ಜಂಟಿ ಖಾತೆ ಇದೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿಯ 8 ನೇ ಸ್ವತ್ತು ನಂಜನಗೂಡಿನ ಶಂಕರಪುರದಲ್ಲಿದೆ. ಸಾಕ್ಷಿಯು ಸ್ವತಃ ಈ ದಾವಾ ಸ್ವತ್ತಿಗೂ ನಮಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ.

2006 ರಲ್ಲಿ ನಾವು ದಾವೆ ಸಲ್ಲಿಸುವಾಗ 1 ನೇ ಪ್ರತಿವಾದಿಗೆ ಸಹೋದರಿಯರು ಇರುವ ವಿಚಾರ ಗೊತ್ತಿದ್ದರೂ ಅವರನ್ನು ಕೈಬಿಟ್ಟು ದಾವೆ ಸಲ್ಲಿಸಿದ್ದೆವು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅವರೆಲ್ಲರೂ ನ್ಯಾಯಾಲಯಕ್ಕೆ ಬರುತ್ತಿದ್ದ ಕಾರಣ ನಾನು ಅವರನ್ನು ದಾವೆಯಲ್ಲಿ ಸೇರಿಸಿರಲಿಲ್ಲ ಎಂದು ನುಡಿಯುತ್ತಾರೆ. ಹೆಣ್ಣು ಮಕ್ಕಳನ್ನು ದಾವೆಯಲ್ಲಿ ಸೇರಿಸಿದರೆ ಅವರಿಗೂ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಹಾಗೂ ನಾವು ನಾವೇ ಹೆಚ್ಚಿನ ಭಾಗ ಪಡೆಯಲು ಈ ದಾವೆಯ ವಾದಿಯರನ್ನು ಮತ್ತು 6 ನೇ ಪ್ರತಿವಾದಿಯನ್ನು ಓ ಎಸ್ 81/2006 ರಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ.

ಒ ಎಸ್ 81/2006 ರಲ್ಲಿ ಆದ ತೀರ್ಪು ಈ ದಾವೆಯ ವಾದಿಯರನ್ನು ಮತ್ತು 6 ನೇ ಪ್ರತಿವಾದಿಯನ್ನು ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.